Regd. No M. [illegible] ADI

ಸ್ವರಾಜ್ಯ

(ಆರಮನೆ ಸಿರಸ್ತೇದಾರ್ ಎಂ. ವಿ. ಸುಬ್ಬರಾಯುರಿಂದ ಸ್ಥಾಪಿಸಲ್ಪಟ್ಟದು)

ಸಂಪುಟ 30 ಸಂಚಿಕೆ 266 | ಮಂಗಳವಾರ 17—6—47 | ಬಿಡಿ ಪ್ರತಿ 6 ಪೈ

ವರ್ತಮಾನ ಸಂಗ್ರಹ

ಪಾಕಿಸ್ತಾನ ಹಿಂದೂಸ್ಥಾನಗಳೇನಪ್ಪ ಟ್ಟರೂ ಕೂಡ ಇಂಡಿಯಾದ ಹೆಸರು ಬದಲಾಯಿಸಲ್ಪಡುವ ಸಂಭವವಿಲ್ಲ. — ಎಂದು ಮ್ಯಾಂಚೆಸ್ಟರ್ ಗಾರ್ಡಿಯನ್ ಪತ್ರಿಕೆಯು ಹೊಸ ದೆಹಲಿಯ ಬಾತ್ಮೀದಾರರು ತಿಳಿಸುತ್ತಾರೆ.

ಏಕೆಂದರೆ ವಿತ್ತ ಪರಿಷತ್ತಿನ ಸದಸ್ಯರಾಷ್ಟ್ರ ಇಂಡಿಯಾವೇ ಹೊರತು ಹಿಂದುಸ್ಥಾನವೂ ಅಲ್ಲ ಪಾಕಿಸ್ತಾನವೂ ಅಲ್ಲ ಎಂದು ಆ ಬಾತ್ಮೀದಾರರು ತಿಳಿಸುತ್ತಾರಂತಾಗಿ ತಿಳಿದಿದೆ.

ಂ ಂ

ಫಾರ್ಮೋಸಾ ರೀಕ್ಯೂ ದ್ವೀಪಗಳನ್ನು ಚೀನಾದಿಂದ ಜಪಾನು ವಾಪ್ಸು ಕೇಳುತ್ತಿರುವದು ನ್ಯಾಯವಲ್ಲವೆಂದು ಚೀನೀ ಪ್ರಮುಖ ಡಾ|| ವಾಂಗ ತಿಳಿಸಿದ್ದಾರೆ.

ಂ ಂ

ಅಖಿಲ ಭಾರತ ಮುಸ್ಲಿಂ ಲೀಗಿನ ಅನುಚರರು ಪಾಕಿಸ್ತಾನ ಚಕ್ರವರ್ತಿಗೆ ಜೈ ಎಂಬುದಾಗಿ ಘೋಷಿಸಿದಾಗ ಜಿನ್ನ ಅನುಚರರನ್ನು ಕುರಿತು ನಾನು ಪಾಕೀಸ್ತಾನದ ಚಕ್ರವರ್ತಿಯಲ್ಲ ಈ ರೀತಿ ಬೊಬ್ಬೆ ಇಡಬೇಡಿ ಎಂದು ಛೀಮಾರಿ ಮಾಡಿದರು.

ಂ ಂ

ರಾಜಕುಮಾರಿ ಎಲಿಜಬತ್ತರಿಗೆ ಲಂಡನ್ನಿನ ಫ್ರೀಡಂ ಆಫ್ ದಿ ಸಿಟಿ ಗೌರವವನ್ನು ಕೊಡಲಾಯಿತು. ಈ ಬಗೆಯ ಗೌರವ ಪ್ರಧಾನವಾಗುತ್ತಿರುವದು ಇದೇ ಮೊದಲು.

ಂ ಂ

ರಾಜ್ಯಾಂಗ ರಚನಾ ಸಭಾಧಿವೇಶನವು ಜುಲೈ 14 ನೇ ತಾರೀಖಿನ ದಿವಸ ಹೊಸ ದೆಹಲಿಯಲ್ಲಿ ಪ್ರಾರಂಭವಾಗುವುದು.

ಂ ಂ

ಫ್ರೆಂಚ್ ವಸಹಾತು ಚಂದ್ರನಾಗೂರಿನಲ್ಲಿರುವ ಎಲ್ಲ ರಾಜಕೀಯ ಪಕ್ಷಗಳೂ ಒಗ್ಗಟ್ಟಾಗಿ ಸೇರಿ ವಸಾಹತಿನ ಸ್ವಾತಂತ್ರ್ಯ ಸಾಧಿಸಲು ಸಂಘ ಸ್ಥಾಪಿಸಿಕೊಂಡಿವೆ.

ಭಾರತದಲ್ಲಿರುವ ಫ್ರೆಂಚ್ ವಸಹಾತುಗಳಲ್ಲಿ ಈ ರೀತಿ ಬಂಧನ ಮುಕ್ತಿ ಸಾಧನಾ ಸಂಘಗಳನ್ನು ಸ್ಥಾಪಿಸುವ ನಿರೀಕ್ಷೆ ಇದೆ.

——

ಆರಮನೆ ಸುದ್ದಿ

ಭಾನುವಾರ ಜೂನ್ 15 — ಈ ದಿವಸ ಶ್ರೀಮನ್ಮಹಾರಾಜರವರು ಮದರಾಸು ಡೆಪ್ಯೂಟಿ ಅಸೆಸ್ಟೆಂಟ್ ಕ್ವಾರ್ಟರ್ ಮಾಸ್ಟರ್ ಜನರಲ್ ಮೇಜರ್ ಬ್ಯೂಟಲ್ಲಾ ರವರಿಗೆ ಭೇಟಿ ದಯಪಾಲಿಸಿದರು.

ಸ್ವಾತಂತ್ರವಾಗಿರುತ್ತೇವೆನುವವರೇಂದ್ರರಿಗೆ ಸಿಡಿಲೇಟೆ !

ನವದೆಹಲಿ ಜೂ 15 — ಅಖಿಲ ಭಾರತ ಕಾಂಗ್ರೆಸ್ ಸಮಿತಿಯಲ್ಲಿ ಭಾರತ ಸಂಸ್ಥಾನಗಳ ಸಂಬಂಧದ ನಿರ್ಣಯದ ಮೇಲೆ ಮಾತನಾಡುತ್ತಾ ನಾವು ಭಾರತದ ಯಾವ ಸಂಸ್ಥಾನದ ಯಾವ ಸ್ವಾತಂತ್ರ್ಯವನ್ನೂ ಲೆಕ್ಕಿಸುವುದಿಲ್ಲ. ಇಷ್ಟೇ ಅಲ್ಲದೆ ಅಂತಹ ಸ್ವಾತಂತ್ರ್ಯವನ್ನು ಯಾವ ವಿದೇಶ ಅಧಿಸ್ಥಾನಗಳಾದರೂ (ಅದು ಎಲ್ಲಿಯದೇ ಆಗಲೀ ಮತ್ತು ಎಂತಹುದೇ ಆಗಲೀ) ಮಾನ್ಯ ಮಾಡಿದರೆ ಅದು ಒಂದು ಸ್ನೇಹ ವಿರುದ್ಧ ಕಾರ್ಯವೆಂದುಗಣಿಸಲಾಗುತ್ತಿದೆ ಎಂದು ಹೇಳಿರುವರು.

ಮದುವೆ ಅಲೋಯನ್ಸು

ಆಸ್ಟ್ರೇಲಿಯಾದಲ್ಲಿ ಜನಸಂಖ್ಯೆ ಇಳಿತಾಯವಾಗಿರುವುದರಿಂದ ಚಿಕ್ಕ ದಂಪತಿಗಳಿಗೆ ಮದುವೆ ಅಲೋಯನ್ಸು ಕೊಡಲು ಯೋಚಿಸಲಾಗುತ್ತಿದೆ.

ಬಂದರುಗಳ ಹಂಚಿಕೆ

ಪಾಕಿಸ್ತಾನಕ್ಕೆ ಕರಾಚಿ ಮತ್ತು ಚಿಟಿಗಾಂಗುಗಳು ಮುಖ್ಯ ಬಂದರುಗಳೆಂದೂ, ಹಿಂದೂಸ್ಥಾನಕ್ಕೆ ಬೊಂಬಾಯಿ ಕೊಚ್ಚಿ, ಮದರಾಸು, ವಿಶಾಖ ಪಟ್ಟಣ ಮತ್ತು ಕಲ್ಕತ್ತಾ ಒಂದರುಗಳೆಂದು ಹೇಳಲಾಗಿದೆ.

ಮಾನವ ಹೃದಯವೇ ಮನೆ, ಅದನ್ನು ಎಷ್ಟು ಚಿತ್ರಗಳಿಂದ ಅಲಂಕರಿಸಿದರೆ ಕಾಸೇ ಆದೀತು. ಎಶ್ವರ್ಯವೆಂಬ ನೂರು ಛಾಯೆಗಳು ಅದರಲ್ಲಿ ಪ್ರತಿಬಿಂಬಿಸುವಂತೆ ಅದನ್ನು ಶುಭ್ರವಾಗಿಡಬೇಕು. ರೂ ಮಿ.

ಮೈಸೂರು ಪೋಲೀಸಿನವನ ಅದೃಷ್ಟ

೧,೧೪,೦೦೦ ರೂ. ಹೊಡೆದ

ಬೆಂಗಳೂರು ಜೂ 15 — ಮೈಸೂರು ಪೋಲೀಸು ದಳದ ಒಬ್ಬ ಹೆಡ್ ಕಾನ್ಸ್‌ಟೆಬಲ್ಲಿಗೆ ಡರ್ಬಿ ಸ್ವೀಪಿನಲ್ಲಿ ರೂ. 114000 ದೊರೆತಿದೆ. ಇದು ಅವನನ್ನು ಆನಂದಗೊಳಿಸಿಲ್ಲ. ಯಾಕೆಂದರೆ ಅವನ ಹೆಂಡತಿ ಹೆಸರಿನಲ್ಲಿ ಈ ಹಣ ದೊರೆತಿದ್ದು ಆಕೆ ಏಪ್ರಿಲ್ ತಿಂಗಳಲ್ಲಿ ಸತ್ತು ಹೋದಳಂತೆ !

ರಷ್ಯಾ ಟರ್ಕಿಯನ್ನು ಮುಟ್ಟಿದರೆ ಯುದ್ಧ

ವಾಷಿಂಗ್‌ಟನ್ ಜೂ 15 — ರಷ್ಯಾವು ತನ್ನ ಆಕ್ರಮಣವನ್ನು ಮುಂದುವರಿಸಿ ಟರ್ಕಿ ಹತ್ತಿರ ತಂದರೆ ಅನೇಕರಿಗಾ ರಷ್ಯಾ ಮೇಲೆ ಯುದ್ಧ ಮಾಡುವುದೆಂದು ಹೆನ್ರಿವಾಲೆಸರು ಭವಿಷ್ಯ ನುಡಿದಿದ್ದಾರೆ.

ಚಿದಂಬರ — ದಕ್ಷಿಣ ಆರ್ಕಾಟು ನಿಂದ ತಿರುಚನಾಪಳ್ಳಿಗೆ ಒಂದು ಗಾಡಿ ಕಡಲೆಯನ್ನು ಕಳ್ಳತನದಿಂದ ಸಾಗಿಸುತ್ತಿದ್ದ ಪಡವಾಚಿ ಎಂಬಾತನನ್ನು ದಸ್ತಗಿರಿ ಮಾಡಲ್ಪಟ್ಟಿದ್ದಾನೆ.

ಕಾರ್ಕುವೂರು ಜು 15 — 'ರಾಜಾ ಬಿಷಾರೀಫ್' ಮೆರವಣಿಗೆ ನಡೆಸಲು ಪ್ರಯತ್ನಿಸಿದ ಬೊಂಬಿಗಾರ ಮುಸ್ಲಿರ ಮೇಲೆ ಗುಂಡುಹಾರಿಸಲಾಯಿತು.

ಬುಡಪೆಸ್ಟ್ — ಹಂಗೇರಿಯ ವಿಚಾರದಲ್ಲಿ ಅಮೇರಿಕಾದ ಪ್ರತಿಭಟನೆಯನ್ನು ರಷ್ಯಾವು ತಿರಸ್ಕರಿಸಿರುವುದು ಬುಡಪೆಸ್ಟಿನಲ್ಲಿ ಅಶ್ಯರ್ಯವನ್ನೂ ಕಿಂಚರತೆಯನ್ನೂ ಉಂಟುಮಾಡಿದೆ.

ಯಾರ್ಗೆ ಕಣ್ಣೊಹ್ಡೆದ್ದರಿ ಇಡೀ ದಿನವೆಲ್ಲಾ ಕಾಳಗ ! !

ಮೊನ್ನೆ ಮುಂಜಾನೆ ಲೀಚ್ ನಗರದ ಸಾನೀಥುನುಂದಿರ 25 ವರ್ಷ ವಯಸಿನ ರೋಹಿಣೀ ನಾಮಾಂಕಿತ ಗಾನ ಡಾಣೀ ವಂಡೆ, ಸಮ್ಮೋಪದ ಕುರ್ಚಿಯಲ್ಲಿ ನವತರುಣಿ ಜಾನಕೀ ಪ್ಯಾರಿ ಎಂಬ ಸಟಿಯೊಡನೆ ಪಾನ ಮಗ್ನನಾಗಿದ್ದ ಜಾನಕೀ ಮಾನನೆಂಬ ಸಿವಾಯಿಗೆ ಕಣ್ಣು ಹೊಹೆದಳು !

ಜಾನಕೀ ಪ್ಯಾರಿ ಕುಪಿತಳಾಗಿ ರೋಹಿಣಿಯನ್ನು ಜುಟ್ಟು ಹಿಡಿದೆಳೆದು ಕುರ್ಚಿಯಿಂದ ಕೆಡಹಿದಳು !

ಪಾಸ ಮಂದಿರದ ಮಾಲೀಕ ಈ ನಾರಿಯರನ್ನೂ ಅ ಸಪತ್ನಿಯನ್ನು ಕಚ್ಚಾಡಿ ಕೊಳ್ಳಿ ಎಂದು ಮಂದಿರದ ಹೊರ ದೂಡಿದನು !

ಅಲ್ಲಿ ದೊಡ್ಡ ಹಗರಣವೇ ಹತ್ತಿತು. ನಾರಿಯರು ಕಚ್ಚಾಟ ಮಿತಿ ಮೀರಿತು. ಸಿವಾಯಿಯು ಸಹಪಾಠಿಗಳು ನಡುವೆ ಸಿಕ್ಕಿ ಬಿದ್ದಿದ್ದ ಸ್ನೇಹಿತನನ್ನು ಉಳಿಸಲು ಓಡಿ ಬಂದರು !

ಹಾದಿಯಲ್ಲಿ ಹಾಯುತ್ತಿದ್ದ ಕೆಲವು ಇಟಾಲಿಯರ್ ಕೂಲಿಗಳೂ ಪಕ್ಷ ವಹಿಸಿ ನಿಂತರು ! ವಸ್ತುತಃ ಒಂದು ಪುಟ್ಟ ಯುದ್ಧವೇ ಕಲೆ ಎತ್ತಿ ತಾಂಡವವಾಡಿತು ! ಈ ಗಲಭೆಯಲ್ಲಿ ಒಂದು ಗ್ಯಾಸ್ ಕಂಭ ಒಡೆದು ಎಲ್ಲೆಲ್ಲೂ ಗ್ಯಾಸ್ ಹಬ್ಬಿತು ಅದನ್ನಾರಿಸುವ ಪಡೆ ಬಂತು ! ಪೋಲೀಸರು ಈ ವೇಳೆಗೆ ಬಂದೇ ಬಂದರು ! ಪೋಲೀಸರನ್ನು ಕಂಡ ಇಟಾಲಿಯರ್ ಕೂಲಿಗಳು ಅವರ ಮೇಲೆ ಹೋರಾಟಕ್ಕೆ ಬಿದ್ದರು ! ದಿನವೆಲ್ಲಾ ಇದೇ ಯುದ್ಧ ! ನಾರಿಯರ ಕಚ್ಚಾಟ ನಿಲ್ಲಲೇ ಇಲ್ಲ. ಕೊನೆಗೆ ಆ ಮೂವರನ್ನೂ ಪೋಲೀಸರು ಲಾಕಪ್ಪಿಗಾಕಿದರು ! ತನ್ನೂ ಹಲವರ ದಸ್ತಗಿರಿಯಾಯಿತು ! ಸೆರೆ ಸಿಕ್ಕಿದ ನಾರಿಯರು ಅತ್ಯಹತ್ಯಕ್ಕೆ ಎತ್ನಿಸಿ ವಿಫಲರಾದರು. ಬಿಡುಗಡೆ ಆಯಿತು. ರಾತ್ರಿ ಬಂತು !

——

೨೦ ಸಾವಿರ ಶಿಕ್ಷಕರ ಉಪವಾಸ

ಸೂರತ ತಾ|| 10 — ಗುಜರಾತಿನ 20 ಸಾವಿರ ಶಿಕ್ಷಕರು ಸೂರತ ಸ್ಕೂಲ್ ಬೋರ್ಡಿನ ಹುಕುಮನ್ನು ನಿಷೇಧಿಸಿ ತಾ|| 25 ಕ್ಕೆ ಒಂದು ದಿನ ಉಪವಾಸವನ್ನು ಆಚರಿಸಲಿರುವರು.

ಕಪಿ ಚೇಷ್ಟೆಗಳು

ಸ್ವರಾಜ್ಯವನ್ನು ಪ್ರಸಾದಿಸಬೇಕಾದ ಪಾಶ್ಚಾತ್ಯರಿಗೆ ನಮ್ಮಲ್ಲಿಯ ಲೋಪದೋಷಗಳನ್ನು ಗುರ್ತಿಸುತ್ತಿರುವಿಕೆಯೇ ಕರ್ತವ್ಯವಾಗಿದೆ. ಆಗಿನ ನಮ್ಮ ಕಾಂಗ್ರೆಸ್ ನಾಯಕರು 'ಹೌದು ಹೌದು' ಎಂದು ತಲೆ ಬಾಗುವದು ಇವರ ಕರ್ತವ್ಯವಾಗಿದೆ. ಛೇ! ನಿಮ್ಮ ವಿಚಾರವು ಧರ್ಮಗಳು ನೆಟ್ಟಗಿಲ್ಲವೆಂದು ಅವರನು ವರು. ಹಾಗಾದಲ್ಲಿ ಅದನ್ನು ನಿರ್ಮೂಲಗೊಳಿಸುವದಾಗಿ ನಮ್ಮವರು ಹೇಳುವರು. ಅಯ್ಯೋ! ದೇಶದಲ್ಲಿ ವಿಧವೆಯರಿರುವಿಕೆಯೇ? ಎಂದು ಅವರನ್ನೆವ ದ್ದು. ಕುಯ್ಯೋ! ವಿಧೆಯಂನ್ನು ಸಧವೆಯರನ್ನಾಗಿ ಮಾಡುವದಾಗಿ ನಮ್ಮವರು ಹೇಳುವರು. 20ನೆಯ ಶತಾಬ್ದದಲ್ಲಿ ಇನ್ನೂ ಬಾಲ್ಯ ವಿವಾಹಗಳೇ? ಎಂದು ಅವರು ಇಗೋ ಹೀಗಲೇ ಶಾಸನವನ್ನು ಮಾಡುವೆವು ಎಂದು ನಮ್ಮವರು. ಅಸ್ಪೃಶ್ಯತೆಯು ಒಳ್ಳಿತಲ್ಲವೆಂದು ಅವರು, ಅಸ್ಪೃಶ್ಯತೆಯು ತೊಲಗಿಸಿ ಕೂಳ್ಳಲಿಯವದಾಗಿ ನಮ್ಮವರು. ವಿಗ್ರಹಾರಾಧನೆ ಏನು ನಾಸ್ತಿಕತೆ ಎಂದು ಅವರು ಅಣಕಿಸುವರು. ನವಿಗೆ ತಿಳಿಯದು. ಹಾಗಾದಲ್ಲಿ ಮಂತ್ರಿಗಳನ್ನು ಬಿಟ್ಟು ಬಿಡುತ್ತೇವೆ. 'ಅಯ್ಯೆ ದೇವರೇ' ಎಂದು ನಿಮ್ಮ ಇಚ್ಛೆಯೇ ನಡೆಯಲಿ ನೆವೆಂದು ನಮ್ಮವರ ಉತ್ತರ. ಅತಃ ಪರದಲ್ಲಿ ಹಿಂಗಸರ ಫೋಷಾ ಏನಿಲ್ಲ

ಹರಾಜು ನೋಟೀಸ್ಸು

1947 ನೇ ಇಸವಿ ಜೂನ್ ತಿಂಗಳ 21 ನೇ ಮತ್ತು 22 ನೇ ತಾರೀಖುಗಳಲ್ಲಿ ಅರಮನೆ ಗ್ಯಾರೇಜಿನಲ್ಲಿ ಬೆಳಿಗ್ಗೆ 9 ಘಂಟೆಯಿಂದ ಮಧ್ಯಾಹ್ನ 1 ಘಂಟೆಯವರೆಗೆ ಒಳ್ಳೆಯ ಸ್ಥಿತಿಯಲ್ಲಿರುವ ಅನೇಕ ನೋಟಾರು ಕಾರುಗಳೂ, ಬಸ್ಸುಗಳೂ ಮತ್ತು ಲಾರಿಗಳೂ ಬಹಿರಂಗವಾಗಿ ಹರಾಜು ಮಾಡಲ್ಪಡುತ್ತವೆ.

ವಿವರಗಳಿಗೆ-ತಾಮಿನಾಡು ಮತ್ತು ಜನವಾಣಿಯಲ್ಲಿ 1947 ನೇ ಜೂನ್ 7 ಮತ್ತು 14 ನೇ ತಾರೀಖು ಪ್ರಕಟವಾಗುವ ಜಾಹಿರಾತನ್ನು ದಯವಿಟ್ಟು ನೋಡಿ.

ಸೂಪರಿಂಟೆಂಡೆಂಟ್
ಪ್ಯಾಲೇಸ್ ಗ್ಯಾರೇಜ್
ಮೈಸೂರು.

ಎಂದು ಅವರಾಶ್ಚರ್ಯ ಸ್ಫೂರ್ತಿಯನ್ನು ಹೊರಕ್ಕೆ ತಂದು ನಾಟ್ಯವಾಡಿಸುವದಾಗಿ ಇವರ ಅಭಿಪ್ರಾಯ. ಸಂತಾನವು ಅನಂತವಾದಲ್ಲಿ ಸ್ವರಾಜ್ಯವನ್ನು ಹೇಗೆ ನಿರ್ವಹಿಸುವಿರಿ ಎಂದು ಇವರು ದಬಾಯಿಸುವರು. ಆ ಸಂತಾನ ನಿರೋಧ ಮಾರ್ಗವನ್ನು ಕೂಡ ನಿಮ್ಮಿಂದಲೇ ಕಲಿಸಿ ಕೊಳ್ಳುವೆವು ಎಂದು ನಮ್ಮವರು. ಈ ಬಗೆಯಲ್ಲಿ ಸ್ವರಾಜ್ಯ ಅರ್ಹತೆಗೆ ಬಿಳಿಯ ದೊರೆಗಳು ನೋಡಿಸುವ ಅತಂಕಗಳು ನಿರಾತಂಕಗಳೆಂದು ನಮ್ಮ ಕಾಂಗ್ರೆಸ್ಸು ಮಹಾನಾಯಕರೂ ಸಿದ್ಧಪಡಿಸಲಾರದೆ ಬಿಳಿಯ ದೊರೆಗಳನ್ನು ಸಂತೋಷಗೊಳಿಸುವಂತೆ ಮಾಡುವಿಕೆಯೂ, ಅನುಸರಿಸುವಿಕೆಯೂ ಶತ್ರುಲವಾಗಿ ಸಂಪೂರ್ಣ ಸ್ವರಾಜ್ಯವು ಸಿದ್ಧಿಸುವದೆಂದು ಭಾವಿಸುವಿಕೆಯೂ ಮರ್ಕಟದ ಅನುಕರಣೆಯಿಲ್ಲದೆ ಹೋಗುವದೇ? ನಮ್ಮ ನಾಯಕರ ಶರೀರವು ಭಾರತೀಯವೇ ಆಗಲಿ, ಮನಸ್ಸು ವಿದ್ಯೆ ನಡವಳಿ, ಊಟ ಗೀಟ ಎಲ್ಲಾ ಬಿಳೀ ದೊರೆಗಳ ಸಂಪತ್ತೇ ಆದ-ದರಿಂದ ಅವರು ಆಡಿಸಿದಂತಲ್ಲಾ ಇವರು ಕುಣಿಯುತ್ತಾ ಭಾರತ ವರ್ಷಕ್ಕೆ ಮಹದಪಕಾರವನ್ನು ಮಾಡುತ್ತಿದ್ದಾರೆ. ಭಾರತ ಜಾತಿಯನ್ನೇ ನಿರ್ಮೂಲಗೊಳಿಸಲು ನೋಡುತ್ತಿದ್ದಾರೆ. ಮತವಿಲ್ಲದ ಇವರು ಮತದಲ್ಲಿ ಬಿದ್ದು ಕಣ್ಣು ಕಾಣದೆ ಹಾರಾಡುತ್ತಿದ್ದಾರೆ.

(ತಿ.)

ಅಕ್ಕರ

ಸಾಮಾಜಿಕ

ಭಾವಪರಿಪೂರ್ಣವಾದ ಕಥೆ

ಓದಲು ಪ್ರಾರಂಭಿಸಿದರೆ ಕಥೆ ಪೂರ್ತಿಸುವವರೆಗೂ ಊಟಕ್ಕೆ ಕೂಡ ಏಳಲು ಮನಸ್ಸಾಗುವದಿಲ್ಲ. ಬೆಲೆ 6 ಆಣೆ, ಪೋಸ್ಟೇಜು 1 ಆಣೆ. ಮುಂಗಡ ಕಳುಹಿಸಬೇಕು

ದೊರೆಯುವ ಸ್ಥಳ—

ಸತ್ಯವಾದಿ ಆಫೀಸ್, ಮೈಸೂರು

For Quality Printing

L. N. Press

Sriramp et, MYSORE

ಸತ್ಯವಾದಿ

ದಿನ ಪತ್ರಿಕೆ. ತಿಂಗಳಿಗೆ ಆರಾಣೆ

ಸೋಮವಾರದ ಸಂಚಿಕೆ

ವಾರ್ಷಿಕಚಂದಾ

ಪರಸ್ಥಳಕ್ಕೆ ಅಂಚೆವೇರಿ ಚ್ಚ ಸ 1-12-0

At Opera 9th Glorious Week

RAJAKUMARI

ಟಿ. ಎಸ್. ಬಾಲಯ್ಯ, ಶಶಿಮುಖಿ ಮುಂತಾದ ತಾರಾಮಂದಿರ್ಯ ನುಸಿದುನ

ರಾಜಕುಮಾರಿ

(ತಮಿಳು)

ಶ್ರೀ 'ಓಂ' ಗುರುತಿನ

ಆರಿಸಿದ ಪರಿಶುದ್ಧ ಕೇಸರಿ



ಈ ಶ್ರೀ ಓಂ ಗುರುತಿನ ಕೇಸರಿಯು ಗ್ಯಾರಂಟಿಯಾಗಿ ಪರಿಶುದ್ಧವಾದುದು. ಸ್ಪೇನ್ ದೇಶದಲ್ಲಿಯು ಕೈಸರಿ ಗಿಡಗಳಿಂದ ಆರಿಸಲ್ಪಟ್ಟ ಹೂಗಳಿಂದ ಕಿತ್ತಲ್ಪಟ್ಟು ಆರಿಸಿ ತೆಗೆಯಲ್ಪಟ್ಟಿದಾಗಿದೆ. ಇದರಲ್ಲಿ ಏನೆಂದು ಆಕ್ಷೇಪಣೀಯ ಪದಾರ್ಥವೂ ಸೇರಿಲ್ಲ ಮತ್ತು ಧಾರ್ಮಿಕವಾಗಿಯೂ ಪರಿಶುದ್ಧವಾದುದು. ದೇವಾಲಯಗಳಲ್ಲಿಯೂ ದೇವರ ಪೂಜೆಗೂ ವಂತಾಚಾರ ಸಮಾರಂಭಗಳಲ್ಲಿಯೂ ಎಲ್ಲ ಸಂತೋಷ ಮತ್ತು ಸಾಂಘಿಕ ಕೂಟಗಳಲ್ಲಿಯೂ ಉಪಯೋಗಿಸಲ್ಪಡತಕ್ಕದ್ದಾಗಿದೆ. ಎಂದು ಶಿಫಾರಸ್ ಮಾಡಲ್ಪಟ್ಟಿದೆ

ವಲ್ಲಭದಾಸ್ ತೇಜ್ ಪಾಲ್,

(ಹಿಂಗು, ಕೇಸರಿ ಮತ್ತು ಕಿರಾಣ ವ್ಯಾಪಾರಿಗಳು)

ಗೋವಿಂದಪ್ಪ ನಾಯಕ್ ರಸ್ತೆ, ಪೋ. ಟಿ: ಮದರಾಸು.

"ರಾಜಕುಮಾರಿಯ" ಒಂದು ದೃಶ್ಯ

Edited, Printed and Publishedby M. S Krishna Rao at the Satyvadi Press Chamara Agrahar, Mysore.